## ಕಳೆದ ಸಂಚಿಕೆಯಲ್ಲಿ



ತನ್ನ ಮತ್ತು ನೀನಾಳ ಸಂಬಂಧದ ಬಗ್ಗೆ ಕರೀನಾ ಮತ್ತು ಜೊಹಾನಾ ಅವರಿಗಿದ್ದ ಅಭಿಪ್ರಾಯಗಳನ್ನು ತಿಳಿಯುತ್ತಾ ಹೋದಂತೆ ಪಾಲ್‌ನ ಮನಸ್ಸು ಖಿನ್ನವಾಗತೊಡಗಿತು. ಅಜ್ಜ–ಅಜ್ಜಿ ಭಾರತೀಯ ಸಂಸ್ಕೃತಿಯನ್ನು ಹೇರಿದ್ದರಿಂದಾಗಿ, ಅಮ್ಮನ ಬಾಲ್ಯ ಗಾಸಿಗೊಂಡಿತು ಎನ್ನುವ ಜೊಹಾನಾಳ ತರ್ಕವನ್ನು ಅರಗಿಸಿಕೊಳ್ಳುವುದು ಅವನಿಗೆ ಕಷ್ಟವಾಯಿತು. ನೀನಾಳಿಗೆ ಸಂಬಂಧಿಸಿದಂತೆ ಆಲಿವರ್ ತಪ್ಪು ಸಂಗತಿಗಳನ್ನು ಜೊಹಾನಾಳಿಗೆ ಹೇಳಿದ್ದ. ಆಲಿವರ್‌ನ ವಂಚನೆಯ ಬಗ್ಗೆ ನೀನಾ ತಿಳಿಸಿದ ಸಂಗತಿಗಳು ಪಾಲ್‌ಗೆ ನೆನಪಾದವು. ಅದನ್ನು ಜೊಹಾನಾಗೆ ತಿಳಿಸುವುದರಿಂದ ಯಾವುದೇ ಲಾಭವಿಲ್ಲವೆಂದು ಅವನಿಗೆ ತಿಳಿದಿತ್ತು. ಆದರೆ, ಪಾಲ್ ಮತ್ತು ನೀನಾಳ ಐವಿಎಫ್ ಫಲಗೂಡದಿರಲಿ ಎಂದು ಕರೀನಾಳೊಂದಿಗೆ ತಾನು ಪ್ರಾರ್ಥಿಸುತ್ತಿದ್ದುದಾಗಿ ಜೊಹಾನಾ ಹೇಳಿದ್ದು ಕೇಳಿ ಅವನು ಬೇಸರಗೊಂಡ. ಪಾಲ್‌ನ ಮಕ್ಕಳಾದ ಲೂಸಿ–ಗ್ರೇಸಿಗೂ ಐವಿಎಫ್ ಯಶಸ್ವಿಯಾಗಿರುವುದು ಬೇಕಿರಲಿಲ್ಲ ಎಂದು ಜೊಹಾನಾ ಹೇಳಿದಳು. ಬೆನ್ನ ಹಿಂದಿನ ಮುಖವಾಡಗಳು ಪಾಲ್‌ನನ್ನು ಬೆಚ್ಚಿಬೀಳಿಸುವಂತಿದ್ದವು.

ಶೀಲಾ ದೇವಿಯವರು ಓರ್ವ ವ್ಯಾವಹಾರಿಕ ಮಹಿಳೆಯಾಗಿದ್ದರು. ಅವರು ಇಷ್ಟು ವರ್ಷಗಳ ಕಾಲ ಬಿಜಿನೆಸ್ ಮಾಡಿದ್ದರಿಂದಾಗಿ ವಸ್ತುಗಳು ಹೇಗಿರಬೇಕು ಎಂಬುದು ಅವರಿಗೆ ತಿಳಿದಿತ್ತು. ಅವರು ನೀನಾಳ ಮನೆಯಲ್ಲಿ ಒಂದು ಓಪನ್‌ಹೌಸ್ ಮಾಡಿಸಿದ್ದರು; ಅದಕ್ಕೆ ಪ್ರಚಾರವನ್ನು ಸ್ಥಳೀಯ ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟು ಬಂದಿದ್ದರು.

ಬೆಳಿಗ್ಗೆ ಎಂಟು ಗಂಟೆಗೆ ನಾನು ಮತ್ತು ಶೀಲಾ ದೇವಿ ಮನೆಗೆ ಹೋದೆವು. ಮನೆಯಲ್ಲಿ ನೀರವತೆ ಮತ್ತು ವ್ಯಥೆ ಕವಿದಿತ್ತು. ನಾವು ನಮ್ಮ ಕೆಲಸವನ್ನು ಆರಂಭಿಸಿದೆವು. ಏನೇನನ್ನು ತೆಗೆದುಕೊಳ್ಳಬೇಕಿತ್ತೋ, ಅವೆಲ್ಲವನ್ನೂ ಪ್ಯಾಕ್ ಮಾಡಿದೆವು. ಫರ್ನಿಚರ್, ಎಲೆಕ್ಟ್ರಾನಿಕ್ಸ್, ಪಾತ್ರೆಗಳು, ಕ್ರಾಕರಿ, ಬಟ್ಟೆ, ಪುಸ್ತಕಗಳು, ಅಲಂಕಾರದ ವಸ್ತುಗಳು, ಲ್ಯಾಂಪ್ಸ್, ಪೇಂಟಿಂಗ್ಸ್... ಹೀಗೆ ನೀನಾಳ ಮನೆಯಲ್ಲಿ ಸಾಕಷ್ಟು ಸಾಮಾನುಗಳಿದ್ದವು. ಎಲ್ಲಾ ವಸ್ತುಗಳ ಪ್ರದರ್ಶನವೂ ಆಗಿತ್ತು. ಎಲ್ಲಾ ವಸ್ತುಗಳ ಬೆಲೆಯನ್ನು ಒಂದು ಚೀಟಿಯಲ್ಲಿ ಬರೆದು, ಅವುಗಳ ಮೇಲೆ ಹಾಕಲಾಗಿತ್ತು. ಈ ಕೆಲಸವನ್ನು ಶೀಲಾದೇವಿಯವರು ಮೊದಲೇ ಬಂದು ಮಾಡಿದ್ದರು. ನಾನು ಅಂದು ಅವರೊಂದಿಗೆ ಮನೆಗೆ ಬಂದಾಗ ಎಲ್ಲಾ ಸಾಮಾನುಗಳನ್ನು ಮಾರುವುದಕ್ಕಾಗಿ ಇಡಲಾಗಿತ್ತು. ವಸ್ತುಗಳನ್ನು ಅತ್ತಇತ್ತ ಮಾಡುವಾಗ ಶೀಲಾದೇವಿಯವರು ಅನೇಕ ಬಾರಿ ರೋದಿಸಿದರು. ನೀನಾಳ ಮನೆ ನಾಶವಾಗುವುದನ್ನು ನೋಡಿ ನನ್ನ ಗಂಟಲು ಸಹ ಒತ್ತಿ ಬಂತು. ಮನೆಯೆಂಬ ಗೂಡಿನಿಂದ ಹುಲ್ಲು ಕಡ್ಡಿಗಳು ಪರಸ್ಪರ ಬೇರೆಯಾಗುತ್ತಿದ್ದವು.

‘ನ ಉಜಾಡ್ ಎ ಖುದಾ ಕಿಸೀ ಕೆ ಆಶಿಯಾನೆ ಕೋ. ವಕ್ತ್ ಬಹುತ್ ಲಗತಾ ಹೈ ಎಕ್ ಛೋಟಾ–ಸಾ ಘರ್ ಬನಾನೆ ಕೋ’ (ಖುದಾ, ನಾಶ ಮಾಡಬೇಡ ಯಾರ ಮನೆಯನ್ನೂ, ತುಂಬಾ ಸಮಯ ಹಿಡಿಯುತ್ತದೆ ಕಟ್ಟಲು ಒಂದು ಮನೆಯನ್ನು).

ನನಗೆ ನೀನಾಳ ಬೆಡ್‌ರೂಮಿನ ಸೈಡ್ ಟೇಬಲ್‌ನ ಬಾಕ್ಸ್‌ನಲ್ಲಿ ಅವಳ ವ್ಯಾನಿಟಿ ಬ್ಯಾಗ್ ಸಿಕ್ಕಿತು. ಅದರಲ್ಲಿ ನೂರಾ ಐವತ್ತು ಕ್ರೋನರ್, ನೀನಾಳ ಡ್ರೈವಿಂಗ್ ಲೈಸೆನ್ಸ್ ಮತ್ತು ನಾನು ನೀನಾಳೊಂದಿಗಿದ್ದ ಒಂದು ಫೋಟೊ ಇತ್ತು. ನಾನು ಫೋಟೊವನ್ನು ಗಮನಿಸಿದೆ. ಅದು ಥಾಯ್ಲೆಂಡಿನ ಸಮುದ್ರತೀರದಲ್ಲಿ ತೆಗೆದ ಫೋಟೊ ಆಗಿತ್ತು. ನಾನು ಮರಳಿನ ಮೇಲೆ ನೀನಾಳ ಹಿಂದೆ ನಿಂತಿದ್ದೇನೆ, ಅವಳನ್ನು ಬಾಹುಗಳಲ್ಲಿ ಬಂಧಿಸಿದ್ದೇನೆ. ನೀನಾಳ ತಲೆಕೂದಲುಗಳು ನನ್ನ ಮುಖದ ಮೇಲೆ ಲಾಸ್ಯವಾಡುತ್ತಿವೆ. ನಾವಿಬ್ಬರು ಮನಸಾರೆ ನಗುತ್ತಿದ್ದೇವೆ. ನಮ್ಮ ಹಿಂದೆ ಸಮುದ್ರ ಬಿಳಿಯ ನೀರಿನ ಗುಳ್ಳೆಗಳನ್ನು ಉಗುಳುತ್ತಿದೆ. ವಾಸ್ತವವಾಗಿ ಥಾಯ್ಲೆಂಡ್ ನಮ್ಮ ಮುರಿದ ಸಂಬಂಧಗಳನ್ನು ದುರಸ್ತಿ ಮಾಡುತ್ತಿತ್ತು. ಆದರೆ ಸಮುದ್ರ ತೀರದಿಂದ ಹೋಟೆಲ್‌ಗೆ ಮರಳಿ ಹೋದಾಗ ನನಗೆ ನನ್ನ ತಂದೆ ನಿಧನರಾದ ಸುದ್ದಿ ತಿಳಿದು, ನಾನು ಎಲ್ಲರೆದುರು ನೀನಾಳನ್ನು ನಿಂದಿಸಿದ್ದು ಎಲ್ಲವನ್ನೂ ನಾಶ ಮಾಡಿತು.

ನಾನು ನನ್ನ ದುಃಖದಿಂದ ಹೊರ ಬಂದಾಗ ನೀನಾ ನನಗೆ ಹೇಳಿದ್ದಳು, ‘ನೀವು ಆರು ವರ್ಷದ ಮಗುವೊಂದು ತನ್ನ ತಂದೆ–ತಾಯಿಗೆ ಚಡಪಡಿಸುವಂತೆ ವರ್ತಿಸುತ್ತಿದ್ದಿರಿ. ನೀವು ನಿಮ್ಮ ತಂದೆಯ ಕೊನೆಯ ಸಮಯದಲ್ಲಿ ಅವರ ಸಮೀಪದಲ್ಲಿರಲಿಲ್ಲ, ಇದು ನನಗೂ ದುಃಖದ ಸಂಗತಿಯೇ, ಆದರೆ ಇದರಲ್ಲಿ ನನ್ನ ತಪ್ಪಿರಲಿಲ್ಲ’. ಹೀಗೆಂದು ನೀನಾ ಬೇಸರದಿಂದ ಹೇಳಿದ್ದಳು.

‘ಓಹ್ ನೀನಾ’, ನಾನು ಭಾವಪರವಶನಾದೆ. ನೀನಾ ನನ್ನನ್ನು ತನ್ನ ಮನೆ ಮತ್ತು ಜೀವನದಿಂದ ಹೊರಹಾಕಿದಳು, ಆದರೆ ಬಹುಶಃ ಅವಳು ತನ್ನ ಹೃದಯದಿಂದ ನನ್ನನ್ನು ಹೊರಹಾಕದಾದಳು. ನಾನು ಆ ಫೋಟೊವನ್ನು ನನ್ನ ಬಳಿ ಇಟ್ಟುಕೊಂಡೆ, ವ್ಯಾನಿಟಿ ಬ್ಯಾಗನ್ನು ಶೀಲಾ ದೇವಿಯವರಿಗೆ ಕೊಟ್ಟೆ.

ನಾನು ಈ ಮನೆಯಲ್ಲಿ ಏಳು ವರ್ಷಗಳಿದ್ದೆ. ಲಗೇಜುಗಳನ್ನು ಪ್ಯಾಕ್ ಮಾಡುವಾಗ ಒಂದೇ ಸಮನೆ ಆ ಮನೆಯಲ್ಲಿ ಕಳೆದ ಕ್ಷಣಗಳನ್ನು ನೆನಪು ಮಾಡಿಕೊಳ್ಳುತ್ತಿದ್ದೆ. ನಾನು ಮತ್ತು ನೀನಾ ಡ್ರಾಯಿಂಗ್ ರೂಮಿನಲ್ಲಿ ಒಟ್ಟಿಗೆ ಕೂತು ಟೀವಿ ನೋಡುತ್ತಿದ್ದೆವು; ಟೀವಿ ನೋಡುತ್ತಲೇ ನಾವಿಬ್ಬರು...

ನಾನು ಅಡುಗೆ ಮನೆಯಲ್ಲಿ ನಿಂತಿದ್ದೇನೆ, ನೀನಾ ನನಗೆ ಇಂಡಿಯನ್ ವೆಜಿಟೆಬಲ್ ಬಿರಿಯಾನಿ ಮಾಡುವುದನ್ನು ಕಲಿಸುತ್ತಿದ್ದಾಳೆ. ಅವಳು ಡ್ರಾಯಿಂಗ್ ರೂಮಿನಲ್ಲಿ ಈ ಜಾಗದಲ್ಲಿ ನಿಂತು ಹೇಳಿದ್ದಳು, ‘ನಾನು ಮತ್ತು ಪಾಲ್ ಬೇರೆಯಾಗುತ್ತಿದ್ದೇವೆ...!’

ನಾನು ದುಃಖದಲ್ಲಿ ಮುಳುಗಿದೆ. ಹೀಗೆ ಅದೆಷ್ಟೋ ನೆನಪುಗಳು ಕಾಡಿದವು.

ನಾನು ಅಡ್ಡಾಡುತ್ತಾ ಗ್ಲಾಸ್‌ರೂಮಿಗೆ ಬಂದೆ. ಕಿಟಕಿಯಿಂದ ಹೊರಗಿನ ಲಾನ್ ಅನ್ನು ಇಣುಕಿ ನೋಡಿದೆ. ಬೇಸಿಗೆ ಕಾಲದಲ್ಲಿ ನಾನು ಮತ್ತು ನೀನಾ ಲಾನ್‌ನಲ್ಲಿ ಗ್ರಿಲ್ ಮಾಡುತ್ತಿದ್ದೆವು. ಪ್ರತಿ ವರ್ಷ ನಮ್ಮ ಮಿತ್ರರನ್ನು ಕರೆದು ಬೇಸಿಗೆ ದಿನಗಳಲ್ಲಿ ಸಮ್ಮರ್ ಪಿಕ್‌ನಿಕ್ ಏರ್ಪಡಿಸುತ್ತಿದ್ದೆವು. ಸೇಬಿನ ಮರ ಹಣ್ಣುಗಳಿಂದ ತುಂಬಿ ತುಳುಕುತ್ತಿತ್ತು. ನೀನಾ ನನ್ನಿಂದ ಹಣ್ಣುಗಳನ್ನು ಕೀಳಿಸುತ್ತಿದ್ದಳು. ನಂತರ ಸೇಬಿನ ಮುರಬ್ಬಾ, ಕೇಕ್, ಶರಬತ್ – ಹೀಗೆ ಅನೇಕ ವ್ಯಂಜನಗಳನ್ನು ತಯಾರಿಸಲಾಗುತ್ತಿತ್ತು. ಒಂದು ಬುಟ್ಟಿ ತುಂಬಾ ಸೇಬುಗಳನ್ನು ತುಂಬಿಸಿಕೊಂಡು ಹೋಗಿ, ಅದನ್ನು ಶಾಲೆಯ ಸ್ಟಾಫ್ ರೂಮಿನಲ್ಲಿಡುತ್ತಿದ್ದೆ. ಎಲ್ಲಾ ಅಧ್ಯಾಪಕರು ಮತ್ತು ಸಿಬ್ಬಂದಿಗಳು ಕೆಂಪು ತಾಜಾ ಸೇಬನ್ನು ಪ್ರಶಂಸಿಸಿ ಮರದ ಜಾತಿಯನ್ನು ಕೇಳುತ್ತಿದ್ದರು.

ನನ್ನ ದೃಷ್ಟಿ ಸೇಬುಗಳ ಮರಗಳಿಂದ ಸರಿದು ಹಾರ್ಡ್‌ವುಡ್ ಕತ್ಸುರಾ ಮರದೆಡೆಗೆ ಹರಿಯಿತು. ಇದೇ ಮರಕ್ಕೆ ಪೀಟರ್ ನೇಣು ಹಾಕಿಕೊಂಡಿದ್ದ. ಯೋಚಿಸಿದಾಗ ಎಷ್ಟು ವಿಚಿತ್ರವೆನಿಸುತ್ತದೆ. ನನ್ನ ರೋಮಗಳು ಇಂದಿಗೂ ಸೆಟೆದು ನಿಲ್ಲುತ್ತವೆ. ಅಂದು ರಾತ್ರಿ ನೀನಾ ತನ್ನ ಬೆಡ್‌ರೂಮಿನಲ್ಲಿದ್ದಳು. ಅವಳ ಕಿಟಕಿ ಹೊರಗಿನ ಲಾನ್‌ನಲ್ಲಿ ತೆರೆದುಕೊಳ್ಳುತ್ತಿತ್ತು, ಕಿಟಕಿಯಿಂದ ಮರ ಸ್ಪಷ್ಟವಾಗಿ ಕಾಣ ಬರುತ್ತಿತ್ತು. ನೀನಾ ಕಿಟಕಿಯ ಈ ಕಡೆಗೆ ಮಲಗಿದ್ದಳು; ಕಿಟಕಿಯ ಆ ಕಡೆಗೆ ಪೀಟರ್ ತನ್ನ ಕೊರಳಿಗೆ ನೇಣು ಬಿಗಿದುಕೊಳ್ಳುತ್ತಿದ್ದ, ಹಗ್ಗದ ಇನ್ನೊಂದು ತುದಿಯನ್ನು ಕೊಂಬೆಗೆ ಕಟ್ಟುತ್ತಿದ್ದ, ನಂತರ ಅದಕ್ಕೇ ಜೋತು ಬಿದ್ದ. ಈ ಎಲ್ಲಾ ಕೆಲಸಗಳಿಗೆ ಸ್ವಲ್ಪ ಸಮಯ ಹಿಡಿದಿರಬೇಕು, ಸ್ವಲ್ಪ ಸದ್ದೂ ಆಗಿರಬಹುದು. ಆದರೆ ನೀನಾಳ ಗಮನ ಅತ್ತ ಕಡೆಗೆ ಹರಿಯಲಿಲ್ಲ! ಪೀಟರ್ ಮರದ ಕೊಂಬೆಯವರೆಗೆ ಹೇಗೆ ಹೋದ? ಅವನು ಮರವನ್ನು ಹತ್ತಿದ್ದನೇ? ಅವನು ತನ್ನ ಕಾಲುಗಳಿಗೆ ಬೂಟುಗಳನ್ನು ಧರಿಸಿದ್ದ. ಸ್ಟೂಲ್ ಮತ್ತು ಕುರ್ಚಿ ಸಹ ಸಮೀಪದಲ್ಲಿ ಹೊರಳಿ ಬಿದ್ದಿರಲಿಲ್ಲ. ಪೀಟರ್ ಮರದ ಕೊಂಬೆಯವರೆಗೆ ಹೇಗೆ ಹೋದ ಎಂಬುದೇ ನಿಗೂಢವಾಗಿತ್ತು. ಪೀಟರ್‌ನ ನೆನಪಾಗುತ್ತಲೇ ನನಗೆ ಹಗಲು ವೇಳೆಯಲ್ಲಿಯೂ ಹೂವುಗಳಿಂದಾವೃತವಾದ ಆ ಮರ ಭಯಾನಕವಾಗಿ ಕಂಡಿತು. ನಾನು ಕಿಟಕಿ ಪಕ್ಕದಿಂದ ಸರಿದು ಬೇಸ್‌ಮೆಂಟ್‌ಗೆ ಹೋದೆ; ಅಲ್ಲಿ ಶೀಲಾ ದೇವಿ ಕೆಲಸ ಮಾಡುತ್ತಿದ್ದರು.

ಬೇಸ್‌ಮೆಂಟ್‌ನಲ್ಲಿ ಒಂದು ಪ್ಯಾಕೆಟ್ ಸಿಕ್ಕಿತು, ಅದರ ಮೇಲೆ ‘ಪಾಲ್’ ಎಂದು ಬರೆದ ನೀನಾಳ ಬರಹವಿತ್ತು. ನಾನು ಪ್ಯಾಕೆಟನ್ನು ತಿರುಗಾಮುರುಗಾ